QP CODE: 32201

ದ್ವಿತೀಯ ಸೆಮಿಸ್ಟರ್ ಬಿ.ಕಾಂ. ಪದವಿ ಪರೀಕ್ಷೆ, ಮೇ / ಜೂನ್, 2026

(ಎನ್‌ಇಪಿ ಸ್ಕೀಂ)

ಕನ್ನಡ ಭಾಷಾ ಪತ್ರಿಕೆ - 2

(NCB 0010) ಪೂರ್ಣ ದೃಷ್ಟಿ - 2

ಅವಧಿ : 2 ಗಂಟೆಗಳು ಗರಿಷ್ಠ ಅಂಕಗಳು : 60

ವಿದ್ಯಾರ್ಥಿಗಳಿಗೆ ಸೂಚನೆಗಳು:

1. ವಿದ್ಯಾರ್ಥಿಯು ವಿಭಾಗ ಸಂಖ್ಯೆ ಹಾಗೂ ಪ್ರಶ್ನೆ ಸಂಖ್ಯೆಗಳನ್ನು ಸ್ಪಷ್ಟವಾಗಿ ಮಾರ್ಜಿನ್ ಗೆರೆಯ ಒಳಗೆ ಬರೆಯಬೇಕು.
2. ವಿಭಾಗ ಸಂಖ್ಯೆ ಹಾಗೂ ಪ್ರಶ್ನೆ ಸಂಖ್ಯೆಗಳನ್ನು ನಮೂದಿಸದೇ ಇರುವ ಉತ್ತರಗಳನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ.
3. ವಿಭಾಗ - I ರಲ್ಲಿನ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರವನ್ನು ಉತ್ತರ ಪತ್ರಿಕೆಯ ಮೊದಲ ಪುಟದಲ್ಲಿ ಬರೆಯಬೇಕು ಹಾಗೂ ಅದೇ ಪ್ರಶ್ನೆಗಳಿಗೆ ಉತ್ತರವನ್ನು ಪುನರಾವರ್ತಿಸಬಾರದು.
4. ಪ್ರಶ್ನೆ ಪತ್ರಿಕೆಯಲ್ಲಿನ ವಿಭಾಗ - I ರಲ್ಲಿನ ಬಹು ಆಯ್ಕೆಯ ಪ್ರಶ್ನೆಗಳಿಗೆ ನೀಡಲಾದ ಆಯ್ಕೆ ಉತ್ತರಗಳ (Options) ಮೇಲೆ ಯಾವುದೇ ರೀತಿಯ ಗುರುತು ಸೂಚಕ ಚಿಹ್ನೆಗಳಾದ ವೃತ್ತ ಹಾಕುವುದು, ಚುಕ್ಕೆ ಇಡುವುದು, ಸರಿ ಗುರುತು ಮಾಡುವುದು (✓) ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಲಾಗಿದೆ. ಪ್ರಶ್ನೆ ಪತ್ರಿಕೆಯ ಮೇಲೆ (ನೋಂದಣಿ ಸಂಖ್ಯೆಯನ್ನು ಹೊರತುಪಡಿಸಿ) ಬೇರೆ ಯಾವುದೇ ತರಹದ ಬರವಣಿಗೆಗಳನ್ನು ಮಾಡಬಾರದು.

ವಿಭಾಗ - I

I. ಸರಿಯಾದ ಉತ್ತರವನ್ನು ಆಯ್ಕೆ ಮಾಡಿ ಬರೆಯಿರಿ. **(10x1=10)**

I-1. ಮಧುರೆ ಪಟ್ಟಣ ಇರುವ ನದಿ ದಂಡೆ
(ಅ) ಗಂಗಾ (ಆ) ಯಮುನಾ (ಇ) ವಾಘ್ಯೆ (ಈ) ಸರಯೂ

I-2. ಪ್ರಾರ್ಥನೆ ಪದ್ಯ ಬರೆದ ಕವಿ
(ಅ) ಬಿ.ಎಂ.ಶ್ರೀ. (ಆ) ತೀ.ನಂ.ಶ್ರೀ. (ಇ) ಕುವೆಂಪು (ಈ) ಬೇಂದ್ರೆ

I-3. ಜುಂಜಪ್ಪನು ಸಾಕಿದ್ದ ಎತ್ತಿನ ಹೆಸರು
(ಅ) ಮೈಲ (ಆ) ಬೈರ (ಇ) ಬಡಮೈಲ (ಈ) ಕಂಬೇರ

I-4. ಕರ್ತಾರ ಪದದ ಅರ್ಥ
(ಅ) ಕಮ್ಮಟ (ಆ) ಕೆಲಸಗಾರ (ಇ) ಸೃಷ್ಟಿಕರ್ತ (ಈ) ಬಡಗಿಯವನು

I-5. ಗುಟುರಿಕೆ ಎಂದರೆ
(ಅ) ಘರ್ಜನೆ (ಆ) ಕೂಗು (ಇ) ಕರೆಯುವುದು (ಈ) ಕಿರುಚುವುದು

I-6. ಮಣೆಗಾರ ಯಾರ ಆತ್ಮಕತೆ
(ಅ) ಸಿದ್ಧಲಿಂಗಯ್ಯ (ಆ) ತುಂಬಾಡಿ ರಾಮಯ್ಯ
(ಇ) ಕುವೆಂಪು (ಈ) ದೇವನೂರು ಮಹದೇವ

I-7. ಎಮ್ಮೆಯ ಹಾಲು ಕುಡಿದರೆ ..... ಬುದ್ಧಿ
(ಅ) ಚುರುಕು (ಆ) ಕೇಡು (ಇ) ಮಂದ (ಈ) ಒಳ್ಳೆ

I-8. ಅಳುವ ಕಂದನ ತುಟಿಯು ..... ಕುಡಿಯಂಗ
(ಅ) ಹವಳದ (ಆ) ಮುತ್ತಿನ (ಇ) ಬೇವಿನ (ಈ) ಜಾಜೀಯ

I-9. ದ್ರೌಪದಿಯ ಮತ್ತೊಂದು ಹೆಸರು
(ಅ) ಕೃಷ್ಣೆ (ಆ) ಸಾವಿತ್ರಿ (ಇ) ವೇದಾವತಿ (ಈ) ಶ್ಯಾಮಲೆ

I-10. 'ದೇವನಾಂಪ್ರಿಯ ಪ್ರಿಯದರ್ಶಿ'' ಯಾರು?
(ಅ) ಶಿವಾಜಿ (ಆ) ಅಶೋಕ (ಇ) ಮದಕರಿನಾಯಕ (ಈ) ಜುಂಜಪ್ಪ

ವಿಭಾಗ - II

II. ಐದು ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(5x3=15)**

II-1. ಬಡಮ್ಮೆಲ
II-2. ಚೆರಗ
II-3. ಬಿದಿರು
II-4. ಈ ಭೂಮಿ ಬಣ್ಣ ಬುಗುರಿ ಕವಿತೆಯ ಆಶಯ
II-5. ದೇಸೀಯತೆ
II-6. ಕಾಳಿಂಗಯ್ಯ
II-7. ಜನಪದ
II-8. ಜಿ.ಎಸ್. ಶಿವರುದ್ರಪ್ಪ
II-9. ಎಚ್.ಎಸ್. ಅನುಪಮ

ವಿಭಾಗ - III

III. ಕೆಳಗಿನ ಮೂರು ಪ್ರಶ್ನೆಗಳಿಗೆ ನಿಖರವಾದ ಉತ್ತರ ಬರೆಯಿರಿ. **(3x5=15)**

III-1. ಪೂರ್ವ ಮತ್ತು ಪಶ್ಚಿಮಗಳ ಸಮನ್ವಯತೆಯ ಆಶಯವನ್ನು 'ಪೂರ್ವಾಂಗನೆ ಮತ್ತು ಪಶ್ಚಿಮಾಂಗನೆ' ಕವಿತೆಯ ಮೂಲಕ ವಿವರಿಸಿ.

III-2. ಕುಲಕಸುಬುಗಳನ್ನು ಸಂಸ್ಕೃತಿಯ ಹೆಸರಿನಲ್ಲಿ ಪೋಷಿಸಿಕೊಂಡು ಬಂದಿರುವ ಬಗೆಯನ್ನು 'ಹಬ್ಬಗಳ ರಂಗು, ಬಾಬಯ್ಯನ ಜಾತ್ರೆ' ಭಾಗ ಹೇಗೆ ನಿರೂಪಿಸಿದೆ?

III-3. 'ನಾಲ್ಕುಮೊಳ ಭೂಮಿ' ಕತೆಯ ಆಶಯವನ್ನು ವಿವರಿಸಿ.

III-4. ಜಾಗತೀಕರಣದ ಅಪಾಯಗಳನ್ನು 'ಗಿಡುಗ - ಎರೆಹುಳ'ಗಳ ಸಂಕೇತಗಳ ಮೂಲಕ ಕವಿ ಹೇಗೆ ನಿರೂಪಿಸಿದ್ದಾರೆ?

III-5. 'ಸಾವು ಮತ್ತು ಸಾಸಿವೆ' ಧ್ವನಿಸುವ ಸಹಜ ಪ್ರಕೃತಿ ಧರ್ಮದ ರೂಪಕವನ್ನು ವಿವರಿಸಿ.

ವಿಭಾಗ - IV

IV. ಕೆಳಗಿನ ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ. **(2x10=20)**

IV-1. ಮೈಬಣ್ಣ ಮತ್ತು ಸೌಂದರ್ಯ ಇವೆರಡರ ವಾಸ್ತವ ಗ್ರಹಿಕೆಗಳ ಲೋಹಿಯಾ ಚಿಂತನೆಗಳನ್ನು ವಿಶ್ಲೇಷಿಸಿ.

ಅಥವಾ

ಪಶ್ಚಿಮದ ಚಿಂತನೆಗಳನ್ನು ಗ್ರಹಿಸಿಕೊಂಡು ದೇಸಿಯ ನೆಲೆಗಳನ್ನು ಹುಡುಕುವ ಜಿ.ಎಸ್.ಎಸ್. ಅವರ ಆಲೋಚನೆಗಳನ್ನು ವಿಶ್ಲೇಷಿಸಿ.

IV-2. ಅಶೋಕನ ಧರ್ಮ ಸಾಮರಸ್ಯ ಮತ್ತು ಪ್ರಜಾಹಿತ ಕಾರ್ಯಗಳನ್ನು ವಿಶ್ಲೇಷಿಸಿ.

ಅಥವಾ

'ನಮ್ಮ ಎಮ್ಮೆಗೆ ಮಾತು ತಿಳಿವುದೇ?' ಪ್ರಬಂಧದ ಸ್ವಾರಸ್ಯವೇನು?

* * *